ESTD:1976
# ಕಾರವಲ್
21. 11. 2022 ಸೋಮವಾರ, ವೃಶ್ಚಿಕ 5

## ಕಂಕನಾಡಿ ಸ್ಫೋಟ ಯೋಜನಾಬದ್ಧವೆಂದು ಸೂಚನೆ: ಜಾಗ್ರತೆ ಅನಿವಾರ್ಯ

ರಾಜ್ಯದ ಗಡಿ ಪ್ರದೇಶದಲ್ಲಿ ಭಯೋತ್ಪಾದಕರು ಭಾರೀ ಆಕ್ರಮಣಕ್ಕೆ ಗುರಿಯಿಸಿರಿದ್ದಾರೆಂಬುದು ಶನಿವಾರ ಸಂಚರಿಸುತ್ತಿದ್ದ ಆಟೋ ರಿಕ್ಷಾದಲ್ಲಿ ಉಂಟಾದ ಸ್ಫೋಟ ಸಾಬೀತುಪಡಿಸುತ್ತಿದೆ. ರಾಜ್ಯದ ಗಡಿ ಪ್ರದೇಶದಲ್ಲಿ ನಡೆದ ಈ ಆಕ್ರಮಣ ಯತ್ನ ರಾಜ್ಯದಲ್ಲಿ ಸಂಭವಿಸಬಹುದಾದ ಸ್ಥಿತಿಯಾಗಿದೆ.

ಮಂಗಳೂರಿನಿಂದ ಪಂಪ್‌ವೆಲ್‌ಗೆಂದು ತಿಳಿಸಿ ಆಟೋ ಹತ್ತಿದ 24ರ ಹರೆಯದ ಯುವಕನ ಕೈಯಲ್ಲಿದ್ದ ಚೀಲದಲ್ಲಿ ಮೊದಲು ಬೆಂಕಿ ಹತ್ತಿಕೊಂಡಿದ್ದು ಬಳಿಕ ಸ್ಫೋಟ ನಡೆದಿರುತ್ತದೆ. ಸ್ಫೋಟ ವಸ್ತುವಿನೊಂದಿಗೆ ಯುವಕ ಮಂಗಳೂರು ನಿವಾಸಿ ಪುರುಷೋತ್ತಮರ ಆಟೋಕ್ಕೆ ಹತ್ತಿ ಪಂಪ್‌ವೆಲ್‌ಗೆ ಬಿಡುವಂತೆ ತಿಳಿಸಿದ್ದಾನೆನ್ನಲಾಗಿದೆ. ಕಂಕನಾಡಿಗೆ ತಲುಪಿದಾಗ ಸ್ಫೋಟ ನಡೆದಿದೆ.ಚಾಲಕ ಹಾಗೂ ಪ್ರಯಾಣಿಕನಾದ ಮುಹಮ್ಮದ್ ಶರೀಕ್ ಗಂಭೀರ ಸುಟ್ಟ ಗಾಯಗೊಂಡಿದ್ದಾರೆ. ಇವರು ಮಂಗಳೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆಯಲ್ಲಿದ್ದಾರೆ. ಆಟೋದಿಂದ ಒಂದು ಆಧಾರ್ ಕಾರ್ಡ್, ಮೊಬೈಲ್, ಬ್ಯಾಟರಿಗಳು, ಸ್ಫೋಟಕ ವಸ್ತುಗಳು, ಸ್ಫೋಟಿಸಲು ಉಪಯೋಗಿಸುವ ಟೈಮರ್, ಪ್ರೆಶರ್ ಕುಕ್ಕರ್ ಮೊದಲಾದವುಗಳನ್ನು ಪತ್ತೆಹಚ್ಚಲಾಗಿದೆ.

ಪೊಲೀಸರಿಗೆ ಲಭಿಸಿದ ಆಧಾರ್ ಕಾರ್ಡ್ ಪರಿಶೀಲಿಸಿದಾಗ ಅದು ತಮಿಳುನಾಡು ನಿವಾಸಿ ಸುರೇಂದ್ರನ್ ಎಂಬವನದ್ದೆಂದು ಕರ್ನಾಟಕ ಪೊಲೀಸರು ಪತ್ತೆಹಚ್ಚಿದ್ದಾರೆ. ರೈಲ್ವೇ ನೌಕರನಾದ ಈತನ ಆಧಾರ್ ಆರು ತಿಂಗಳ ಹಿಂದೆ ಕಾಣೆಯಾಗಿತ್ತೆಂದೂ ತಿಳಿಯಲಾಗಿದೆ.

ಈ ಆಧಾರ್‌ನಿಂದ ವ್ಯಕ್ತಿಯ ಭಾವಚಿತ್ರ ಬದಲಾಯಿಸಿದ ಬಳಿಕ ಶರೀಕ್‌ನ ಭಾವಚಿತ್ರ ಅಂಟಿಸಲಾಗಿದೆಯೆಂದೂ ತಿಳಿದು ಬಂದಿದೆ. ಫೋಟೋ ಬದಲಾಯಿಸುವ ಮುಂಚೆ ಆ ಆಧಾರ್ ಕಾರ್ಡ್ ಬಳಸಿ ಕೊಯಂಬತ್ತೂರಿನಿಂದ ಮೊಬೈಲ್ ಸಿಮ್ ಕಾರ್ಡ್‌ನ್ನು ಶರೀಕ್ ಪಡೆದಿದ್ದನು. ಕೆಲವು ತಿಂಗಳ ಹಿಂದೆ ಕೊಯಂಬತ್ತೂರಿನಲ್ಲಿ ವಾಸಿಸಿದ ಈತ ಯಾರಿಗೂ ತಿಳಿಯದೆ ಮೈಸೂರಿನಲ್ಲಿ ಉದ್ದಿಮೆ ಕೇಂದ್ರದ ಸಮೀಪ ಆ ಆಧಾರ್ ಬಳಸಿ ಕೊಠಡಿ ಪಡೆದಿದ್ದನು. ಉದ್ಯೋಗ ಹುಡುಕಿ ಬಂದಿರುವುದಾಗಿ ವಸತಿಗೃಹದ ಮಾಲಕನಿಗೆ ತಿಳಿಸಿರುವುದಾಗಿ ಆತ ತಿಳಿಸಿದ್ದನು. ಕಂಕನಾಡಿಯ ಸ್ಫೋಟದ ಬಳಿಕ ಮೈಸೂರಿನಲ್ಲಿ ತನಿಖೆ ನಡೆದಾಗ ಈತ ಅಲ್ಲಿ ವಾಸಿಸಿದ್ದ ಕೊಠಡಿಯಿಂದ ಸ್ಫೋಟಕವಸ್ತುಗಳು ಹಾಗೂ ಅದನ್ನು ಬಳಸಲು ಉಪಯೋಗಿಸುವ ಸಾಮಗ್ರಿಗಳು, ಪ್ರೆಶರ್ ಕುಕ್ಕರ್‌ಗಳನ್ನು ಪತ್ತೆಹಚ್ಚಿರುವುದಾಗಿ ಸೂಚನೆಯಿದೆ. ಆತ ಪ್ರೆಶರ್ ಕುಕ್ಕರ್ ಬಾಂಬು ತಯಾರಿಯಲ್ಲಿ ತಿಳುವಳಿಕೆ ಹೊಂದಿದವನಾಗಿದ್ದಾನೆಂದೂ, ಈತ ಉಗ್ರ ಸಂಘಟನೆಯೊಂದಿಗೆ ನಂಟು ಹೊಂದಿರಬಹುದೇ ಎಂದು ಸಂಶಯಿಸಲಾಗುತ್ತಿದೆ. ಪ್ರೆಶರ್ ಕುಕ್ಕರ್ ಬಾಂಬ್ ತಯಾರಿಸಿ ಪಂಪ್‌ವೆಲ್‌ಗೆ ಪ್ರಯಾಣಿಸುತ್ತಿದ್ದುದು ಯಾರ ವಿರುದ್ಧ ಬಳಸಲಾಗಿದೆ ಎಂದೂ, ಯಾಕಾಗಿದೆಯೆಂದೂ ಈತನನ್ನು ತನಿಖೆಗೊಳಪಡಿಸಿದರೆ ಮಾತ್ರವೇ ತಿಳಿಯಬಹುದಾಗಿದೆ. ಸುಟ್ಟ ಗಾಯಗೊಂಡ ಈತನಿಗೆ ಈಗ ಮಾತನಾಡಲು ಸಾಧ್ಯವಾದ ಸ್ಥಿತಿ ಇದೆಯೆಂದು ಪೊಲೀಸ್ ಮೂಲಗಳು ತಿಳಿಸುತ್ತಿವೆ.

ಈ ಮಧ್ಯೆ ಕರ್ನಾಟಕ ಪೊಲೀಸರು ಕೊಯಂಬತ್ತೂರಿನಲ್ಲೂ, ಮೈಸೂರು, ಹುಬ್ಬಳ್ಳಿ ಸಹಿತ ಕರ್ನಾಟಕದ ಪ್ರಧಾನ ಸ್ಥಳಗಳಲ್ಲಿ ಹಾಗೂ ಸೂಕ್ಷ್ಮ ಸಂವೇದಿ ಪ್ರದೇಶಗಳಲ್ಲಿ ತನಿಖೆ ತೀವ್ರಗೊಳಿಸಿದ್ದು, ಸೂಕ್ಷ್ಮ ಸಂವೇದಿ ಪ್ರದೇಶಗಳಲ್ಲಿ ಹಾಗೂ ಗಡಿ ಪ್ರದೇಶಗಳಲ್ಲಿ ಅತೀ ಜಾಗ್ರತೆ ಪಾಲಿಸಲಾಗುತ್ತಿದೆ. ಬಸ್ ನಿಲ್ದಾಣಗಳು, ರೈಲ್ವೇ ನಿಲ್ದಾಣಗಳು, ವಿಮಾನ ನಿಲ್ದಾಣಗಳು, ಮೊದಲಾದೆಡೆಗಳನ್ನು ಅತೀ ನಿಗಾ ವಹಿಸಲಾಗುತ್ತಿದೆ. ವಾಹನ ತಪಾಸಣೆ ಮುಂದುವರಿಯುತ್ತಿದೆ. ಅಪರಿಚಿತರು ಹಾಗೂ ಸಂಶಯಿತ ವ್ಯಕ್ತಿಗಳನ್ನು ತನಿಖೆಗಳಪಡಿಸಲಾಗುತ್ತಿದೆ.

ಸ್ಫೋಟ ನಡೆದ ಕೆಲವೇ ನಿಮಿಷಗಳಲ್ಲಿ ಅದಕ್ಕೆ ಸಂಬಂಧಪಟ್ಟ ಮುಖ್ಯ ಮಾಹಿತಿ ಸಂಗ್ರಹಿಸಲು ಕರ್ನಾಟಕ ಪೊಲೀಸರಿಗೆ ಸಾಧ್ಯವಾಗಿದೆ. ಆದರೆ ಇಂತಹ ಘಟನೆ ನಮ್ಮ ರಾಜ್ಯದಲ್ಲಿ ನಡೆದರೆ ಈ ರೀತಿಯಲ್ಲಿ ತ್ವರಿತ ತನಿಖೆ ನಡೆಯಬಹುದೆಂಬ ನಿರೀಕ್ಷೆಯಿಲ್ಲವೆಂದು ಇಲ್ಲಿನ ಸ್ಥಿತಿಗತಿಗಳು ಸೂಚಿಸುತ್ತವೆ. ಮಾತ್ರವಲ್ಲ ಉಗ್ರರ ಸಹಿತ ಅಕ್ರಮಿಗಳನ್ನು ಸಂರಕ್ಷಿಸುವ ನಿಲುವು ಕೈಗೊಳ್ಳಲಾಗುತ್ತಿದೆಯೆಂದು ಇಲ್ಲಿ ಆರೋಪ ಕೇಳಿ ಬರುತ್ತಿದೆ.

ಶಾಂತಿಯುತ ಜೀವನಕ್ಕಾಗಿರುವ ಸಾರ್ವಜನಿಕ ಒಕ್ಕೂಟ ಇಂತಹ ಘಟನೆಗಳನ್ನು ತಡೆಯಲು ಸಹಕರಿಸಲಿದೆ. ಘೋಷಿತ ಸಂಘಟನೆಗಳಿಗೆ ಇಂತಹ ವಿಷಯಗಳಲ್ಲಿ ಆಸಕ್ತಿ ಇಲ್ಲವೆಂದು ಜನರು ಅಭಿಪ್ರಾಯಪಡುತ್ತಿದ್ದಾರೆ.

## ಹಸಿ ತೆಂಗಿನಕಾಯಿ ದಾಸ್ತಾನು ಇನ್ನಷ್ಟು ಕೇಂದ್ರಗಳು ಆರಂಭ

ಕಾಸರಗೋಡು: ರಾಜ್ಯದಲ್ಲಿ ಹಸಿ ತೆಂಗಿನಕಾಯಿ ಖರೀದಿಗೆ ನೂರರಷ್ಟು ಕೇಂದ್ರಗಳನ್ನು ಹೊಸತಾಗಿ ಮಂಜೂರು ಮಾಡಲಾಗಿದೆ. ಇದರಿಂದ ಕೇಂದ್ರಗಳ ಸಂಖ್ಯೆ 150 ದಾಟಿತೆಂದು ಕೃಷಿ ಸಚಿವ ಪಿ. ಪ್ರಸಾದ್ ತಿಳಿಸಿದ್ದಾರೆ.

ಪ್ರಸ್ತುತ ಕೇರಫೆಡ್, ಅಂಗೀಕೃತ ಸೊಸೈಟಿಗಳು, ಪಿಎಫ್‌ಪಿಸಿಕೆ ಮೊದಲಾದವುಗಳ ಮೂಲಕ ಹಸಿ ತೆಂಗಿನ ಕಾಯಿ ಸಂಗ್ರಹಿಸಲಾಗುತ್ತಿದೆ. ತೆಂಗಿನಕಾಯಿ ಮಾರಾಟಗಾರರಾದ ಕೃಷಿಕರಿಗೆ ಆಯಾ ಜಿಲ್ಲೆಗಳ ದಾಸ್ತಾನು ಕೇಂದ್ರಗಳಲ್ಲಿ ದಾಖಲೆ ಪತ್ರಗಳೊಂದಿಗೆ ಸಂಪರ್ಕಿಸಬಹುದು. ಸಂಬಂಧಪಟ್ಟ ಕೃಷಿ ಭವನದ ಕೃಷಿ ಅಧಿಕಾರಿಯ ಸರ್ಟಿಫಿಕೇಟ್, ತೆರಿಗೆ ರಶೀದಿ, ಬ್ಯಾಂಕ್ ಪಾಸ್‌ಪುಸ್ತಕ, ಆಧಾರ್‌ಕಾರ್ಡ್ ಎಂಬಿವುಗಳ ಪ್ರತಿ ಸಹಿತ ದಾಸ್ತಾನು ಕೇಂದ್ರದಲ್ಲಿ ಕೃಷಿಕರು ಹೆಸರು ನೋಂದಾಯಿಸಬಹುದು.

## ಹಿಂಬಾಗಿಲ ನೇಮಕಾತಿ: ಮುಖ್ಯಮಂತ್ರಿ ಪಾಲುದಾರಿಕೆ ತನಿಖೆ ನಡೆಸಬೇಕು-ಬಿಜೆಪಿ

ತೃಶೂರು: ಕಣ್ಣೂರು ವಿಶ್ವ ವಿದ್ಯಾಲಯದಲ್ಲಿ ನಡೆದ ಹಿಂಬಾಗಿಲು ನೇಮಕಾತಿಯಲ್ಲಿ ಮುಖ್ಯಮಂತ್ರಿಯ ಪಾಲುದಾರಿಕೆ ಕುರಿತು ತನಿಖೆ ನಡೆಸಬೇಕೆಂದು ಬಿಜೆಪಿ ರಾಷ್ಟ್ರೀಯ ನಿರ್ವಾಹಕ ಸಮಿತಿ ಸದಸ್ಯ ಪಿ.ಕೆ. ಕೃಷ್ಣದಾಸ್ ಒತ್ತಾಯಿಸಿದ್ದಾರೆ. ಅಗತ್ಯದ ಅರ್ಹತೆಯಿಲ್ಲದವರನ್ನು ನೇಮಿಸಿರುವುದು ಮುಖ್ಯಮಂತ್ರಿಯ ಕಚೇರಿಯ ಮಧ್ಯಸ್ಥಿಕೆ ಮೂಲಕವಾಗಿದೆ. ರಾಜ್ಯದಲ್ಲಿ ಸಿಪಿಎಂ ನೇತಾರರ ಸಂಬಂಧಿಕರಿಗೆ ಮಾತ್ರ ಉದ್ಯೋಗ ಎಂಬುದಾಗಿದೆ ಈಗಿನ ಸ್ಥಿತಿಯೆಂದೂ ಅವರು ಆರೋಪಿಸಿದರು. ನೇಮಕಾತಿಯಲ್ಲಿ ನಡೆದ ವಂಚನೆ ಕುರಿತು ಪೂರ್ಣ ಮಾಹಿತಿ ಬಹಿರಂಗಗೊಳ್ಳಬೇಕಾದರೆ ನ್ಯಾಯಾಂಗ ತನಿಖೆ ನಡೆಸಬೇಕು.

ಅಧಿಕಾರ ದುರುಪಯೋಗ, ಹಿಂಬಾಗಿಲ ನೇಮಕಾತಿಯನ್ನು ವಿರೋಧಿಸಿರುವುದೇ ಸರಕಾರ ರಾಜ್ಯಪಾಲರಿಗೆ ಬೆದರಿಕೆಯೊಡ್ಡಲು ಕಾರಣ. ಸಿಪಿಎಂ ಜಿಲ್ಲಾ ಸೆಕ್ರಟರಿಗಳು ಸಮಾನಾಂತರ ಉದ್ಯೋಗ ವಿನಿಮಯ ಕೇಂದ್ರಗಳಂತೆ ಕಾರ್ಯಾಚರಿಸುತ್ತಿವೆ. ಲಕ್ಷಾಂತರ ರೂಪಾಯಿ ಲಂಚ ಪಡೆದು ಹಿಂಬಾಗಿಲ ನೇಮಕಾತಿ ನಡೆಸಲಾಗುತ್ತಿದೆ. ಉನ್ನತ ಶಿಕ್ಷಣ ವಲಯದ ಹಿನ್ನೆಡೆಗೆ ಕಾರಣ ಸಿಪಿಎಂನ ನೇಮಕಾತಿಗಳಾಗಿವೆ ಎಂದವರು ಆರೋಪಿಸಿದರು.

## ಕ್ರೀಡಾರಂಗ



## ಕೇರಳದ ಎಚ್.ಎಸ್. ಪ್ರಣಯ್, ಎಲ್ದೋಸ್ ಪೌಲ್‌ಗೆ ಸಹಿತ 25 ಮಂದಿಗೆ ಅರ್ಜುನ ಪ್ರಶಸ್ತಿ

ಕೇರಳೀಯರಾದ ಬ್ಯಾಡ್ಮಿಂಟನ್ ಕ್ರೀಡಾ ಪಟುವೂ ಆಗಿರುವ ಎಚ್.ಎಸ್. ಪ್ರಣಯ್ ಹಾಗೂ ಟ್ರಿಪಲ್ (ಅಥ್ಲೀಟ್) ಜಂಪ್ ತಾರೆ, ಎಲ್ದೋಸ್ ಪೋಲ್ ಸೇರಿದಂತೆ ಒಟ್ಟು 25 ಮಂದಿ ಕ್ರೀಡಾ ಪಟುಗಳು ಈ ವರ್ಷದ ಅರ್ಜುನ್ ಪ್ರಶಸ್ತಿಗೆ ನಾಮ ನಿರ್ದೇಶಗೊಂಡಿದ್ದಾರೆ. ಶಟ್ಲರ್ ಲಕ್ಷ್ಯಸೇನ್, ಸೀಮಾ ಪುನಿಯಾ ಬಾಕ್ಸರ್ ನಿಖಿತ್ ಜರೀನ್, ಅಥ್ಲೇಟಿಕ್ ಅವಿನಾಶ್ ಸೇಬಲ್ ಅವರು ಈ ಪ್ರಶಸ್ತಿಗೆ ನಾಮ ನಿರ್ದೇಶಗೊಂಡವರಲ್ಲಿ ಒಳಗೊಂಡಿದ್ದಾರೆ.

ಟೇಬಲ್ ಟೆನಿಸ್ ಆಟಗಾರ ಅಚಂತ್ ಶರತ್ ಕಮಾಲ್‌ರಿಗೆ ಧ್ಯಾನ್ ಚಂದ್ ಖೇಲ್ ರತ್ನ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಈ ವರ್ಷ ಬರ್ಮಿಂಗ್ ಹ್ಯಾಮ್‌ನಲ್ಲಿ



ನಡೆದ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಅಚಂತ ಶರತ್ ಕಮಾಲ್ ಅವರು ಪುರುಷರ ಸಿಂಗಲ್ಸ್‌ನಲ್ಲಿ ನಾಲ್ಕು ಚಿನ್ನದ ಪದಕ ಗೆದ್ದುಕೊಂಡಿದ್ದರು.

ನವೆಂಬರ್ 30ರಂದು ರಾಷ್ಟ್ರಪತಿ ಭವನದಲ್ಲಿ ವಿಶೇಷವಾಗಿ ಆಯೋಜಿಸುವ ಸಮಾರಂಭದಲ್ಲಿ ಪ್ರಶಸ್ತಿ ಪುರಸ್ಕೃತರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರಶಸ್ತಿ ವಿತರಿಸುವರು. ಜವಾನ್ ಜೋತ್ ಸಿಂಗ್ ತೇಜಾ (ಅರ್ಚರಿ), ಮೊಹಮ್ಮದ್ ಅಲೀ ಕಮ್ಮರ್ (ಬಾಕ್ಸಿಂಗ್), ಸುಮಾ ಸಿದ್ಧಾರ್ಥ್ ಶಿರೂರ್ (ಫಾರಾಶೂಟಿಂಗ್) ಮತ್ತು ಸುಜೀತ್ ಮನ್ (ಕುಸ್ತಿ) ಎಂಬವರು ಸಾಮಾನ್ಯ ವಿಭಾಗದಲ್ಲಿ ದ್ರೋಣಾಚಾರ್ಯ ಪ್ರಶಸ್ತಿ ನಾಮ ನಿರ್ದೇಶಗೊಂಡಿದ್ದಾರೆ. ದಿನೇಶ್ ಜವಾಹರ್ ಲಾಡ್ (ಕ್ರಿಕೇಟ್), ಭಿಮಲ್ ಪ್ರಪುಲ್ ಘೋಷ್ (ಫುಟ್‌ಬಾಲ್) ಮತ್ತು ರಾಜ್ ಸಿಂಗ್ ಜೀವಮಾನ್ ವಿಭಾಗದಲ್ಲಿ ಮನ್ನಣೆ ಪಡೆಯ ಲಿದ್ದಾರೆ.

ಅಶ್ವಿನಿ ಅಕ್ಕುಂಜಿ ಸಿ. (ಅಥ್ಲೆಟಿಕ್ಸ್) ಧರಂವೀರ್ ಸಿಂಗ್ (ಹಾಕಿ), ಬಿ.ಸಿ. ಸುರೇಶ್ (ಕಬ್ಬಡಿ) ಮತ್ತು ನೀರ್ ಬಹಾದ್ದೂರ್ ಗುರುಂಗ್ (ಫಾರಾ ಅಥ್ಲೆಟಿಕ್) ಎಂಬವರು ಕ್ರೀಡೆ ಮತ್ತು ಆಟಗಳಲ್ಲಿ ಜೀವಮಾನ ಸಾಧನೆಗಾಗಿ ಧ್ಯಾನ್ ಚಂದ್ ಪ್ರಶಸ್ತಿ ಪಡೆಯಲಿದ್ದಾರೆ.

ಉದಯೋನ್ಮುಖ ಮತ್ತು ಯುವ ಪ್ರತಿಭೆಗಳನ್ನು ಗುರುತಿಸಲು



ಹಾಗೂ ಘೋಷಿಸುವುದಕ್ಕಾಗಿ ಟ್ರಾನ್ಸ್‌ಸ್ಟಡಿಯೋ ಎಂಟರ್ ಪ್ರೈಸಸ್ ಪ್ರೈವೇಟ್ ಲಿಮಿಟೆಡ್‌ಗೆ ರಾಷ್ಟ್ರೀಯ ಖೇಲ್ ಪ್ರೋತ್ಸಾಹನ್ ಪುರಸ್ಕಾರ ಲಭಿಸಲಿದೆ.

ಕಳಿಂಗಾ ಇನ್‌ಸ್ಟಿಟ್ಯೂಟ್ ಆಫ್ ಇಂಡಸ್ಟ್ರಿಯಲ್ ಟೆಕ್ನಾಲಜಿ ಮತ್ತು ಲಡಾಖ್ ಸ್ಕೀಂ ಸ್ನೋಬೋರ್ಡ್ ಅಸೋಸಿಯೇಶನ್‌ಅನ್ನು ಸಾಂಘಿಕ ಸಾಮಾಜಿಕ ಹೊಣೆಗಾರಿಕೆ ಮೂಲಕ ಕ್ರೀಡೆಗಳಿಗೆ ಪ್ರೋತ್ಸಾಹಕ್ಕಾಗಿ ನಾಮ ನಿರ್ದೇಶ ಮಾಡಲಾಗಿದೆ. ಮೌಲಾನಾ ಅಬ್ದುಲ್ ಕಲಾಂ ಅಜಾದ್ (ಎಂ.ಎ.ಕೆ.ಎ) ಟ್ರೋಫಿ -2022ಕ್ಕಾಗಿ ಅಮೃತಸರದ ಗುರುನಾನಕ್ ವಿಶ್ವ

### ರೂಪದರ್ಶಿಯೊಂದಿಗೆ ಪ್ರೇಮ ಸಲ್ಲಾಪ

## ಮುರಿದು ಬಿದ್ದ ಸಾನಿಯಾ-ಶೋಯೇಬ್ ದಾಂಪತ್ಯ

ಸಾನಿಯಾ ಮಿರ್ಜಾ ಭಾರತದಲ್ಲಿ ಮಾತ್ರವಲ್ಲದೆ, ವಿಶ್ವದ ಸ್ಟಾರ್ ಮಹಿಳಾ ಟೆನಿಸ್ ಆಟಗಾರ್ತಿಯರಲ್ಲಿ ಒಬ್ಬರು. ಡಬಲ್ಸ್‌ನಲ್ಲಿ ವಿಶ್ವ ರ್‍ಯಾಂಕಿಂಗ್‌ನಲ್ಲಿ ನಂ.1 ಸ್ಥಾನ ಪಡೆದಿದ್ದರು. ಅವರು ಆರು ಡಬಲ್ಸ್ ಗ್ರ್ಯಾಂಡ್ ಸ್ಲಾಮ್ ಪ್ರಶಸ್ತಿ ಗೆದ್ದಿದ್ದಾರೆ. ಮಹಿಳಾ ಟೆನಿಸ್ ಸಿಂಗಲ್ಸ್ ಶ್ರೇಯಾಂಕದಲ್ಲಿ ಅಗ್ರ 100 ತಲುಪಿದ ಏಕೈಕ ಭಾರತದ ಆಟಗಾರ್ತಿ. 2007ರಲ್ಲಿ ಸಾನಿಯಾ 27ನೇ ರ್‍ಯಾಂಕಿಂಗ್ ತಲುಪಿದ್ದರು.

ಭಾರತದ ಸಾನಿಯಾ ಮಿರ್ಜಾ ಈಗ ಪಾಕಿಸ್ತಾನದ ಸೊಸೆಯಾಗಿದ್ದಾರೆ. ಪಾಕಿಸ್ತಾನದ ಖ್ಯಾತ ಕ್ರಿಕೆಟಿಗ ಶೋಯೆಬ್ ಮಾಲಿಕ್ ಅವರನ್ನು ಪ್ರೀತಿಸಿ ಮದುವೆಯಾದರು. ಈ ತುಂಬಾ ಅನ್ಯೋನ್ಯವಾಗಿದ್ದ ಈ ಜೋಡಿ ಈಗ ದೂರವಾಗಿದ್ದಾರೆ ಎಂಬ ಸುದ್ದಿಯೂ ಈಗ ಹರಡತೊಡಗಿದೆ. ಇತ್ತೀಚೆಗೆ ಸಾನಿಯಾ ಮಿರ್ಜಾ ಅವರ ಪೋಸ್ಟರ್‌ಗಳು ಹೊಸ ಚರ್ಚೆಗೆ ತೆರೆ ಎಳೆದಿವೆ. ಇದರೊಂದಿಗೆ ಸಾನಿಯಾ ಮತ್ತು ಶೋಯೆಬ್ ಬ್ರೇಕ್ ಆಫ್ ಆಗುತ್ತಿದ್ದಾರೆ ಎಂದ ಸುದ್ದಿ ವೈರಲ್ ಆಗಿದೆ.

ಈ ದಂಪತಿಗೆ 2018ರಲ್ಲಿ ಇಜಹಾನ್ ಎಂಬ ಗಂಡು ಮಗು ಹುಟ್ಟಿತ್ತು. ಆದರೆ ಸಾನಿಯಾ ಮತ್ತು ಶೋಯೆಬ್ ಶೀಘ್ರದಲ್ಲೇ ಬೇರ್ಪಡಲಿದ್ದಾರೆ ಎಂಬ ರೀತಿಯ ಊಹಾ ಪೋಹ ಸುದ್ದಿಗಳು ಅಂತರ್ಜಾಲಗಳಲ್ಲಿ ಈಗ ಸಾಕಷ್ಟು ಸಾನಿಯಾ ಮಿರ್ಜಾ ಅವರ ಇತ್ತೀಚಿಗಿನ ಇನ್‌ಸ್ಟಾಗ್ರಾಮ್ ಪೋಸ್ಟ್‌ಗಳು ಬ್ರೇಕ್ ಆಫ್ ಸುದ್ದಿಯ ಊಹಾ ಪೋಹಗಳಿಗೆ ಉತ್ತೇಜನ ನೀಡಿವೆ. ಕೆಲವು ದಿನಗಳ ಹಿಂದೆ ಸಾನಿಯಾ ಮಿರ್ಜಾ ಅವರು ಪುತ್ರ ಇಜಹಾನ್‌ನೊಂದಿಗೆ ಮುದ್ದಾದ ಫೋಟೋವನ್ನು ಹಂಚಿಕೊಂಡು ಅವರ ಜತೆಗೆ ಕಠಿಣ ದಿನಗಳಲ್ಲಿ ನನ್ನನ್ನು ಪಡೆಯುವ ಕ್ಷಣಗಳು ಎಂದು ಬರೆದಿದ್ದಾರೆ.

ತಮ್ಮ ಪುತ್ರ ಇಜಹಾನ್‌ನ 4ನೇ ಹುಟ್ಟು ಹಬ್ಬವನ್ನು ಶೋಯೇಬ್ ಮತ್ತು ಸಾನಿಯಾ ಇತ್ತೀಚೆಗೆ ದುಬೈಯಲ್ಲಿ ಒಟ್ಟಿಗೆ ಆಚರಿಸಿದರು. ಇದಕ್ಕೆ ಸಂಬಂಧಿಸಿ ಶೋಯೇಬ್ ಹಲವಾರು ಫೋಟೋಗಳನ್ನು ಹಂಚಿಕೊಂಡರೆ, ಸಾನಿಯಾ ತನ್ನ ಇನ್‌ಸ್ಟಾಗ್ರಾಮ್‌ನಲ್ಲಿ ಪಾರ್ಟಿಯ ಯಾವುದೇ ಫೋಟೋಗಳನ್ನೂ ಹಂಚಿಕೊಂಡಿಲ್ಲ. ಆದರೆ ಪುತ್ರನ ಹುಟ್ಟುಹಬ್ಬದ ಫೋಟೋ ಶೇರ್ ಮಾಡಿದ ಶೋಯೇಬ್ ಅದಕ್ಕೆ, ನೀನು ಹುಟ್ಟಿದಾಗ ನಮಗೆ ಹೆಚ್ಚು ಹೆಮ್ಮೆ ಅನಿಸಿತು. ನಾನು ನಿನ್ನನ್ನು ಪ್ರತಿದಿನ ನೋಡಲು ಅಥವಾ ಭೇಟಿಯಾಗಲು ಸಾಧ್ಯವಾಗದಿರಬಹುದು. ಆದರೆ ತಂದೆ ಪ್ರತಿಕ್ಷಣವೂ ನಿನ್ನ ಬಗ್ಗೆ ಯೋಚಿಸುತ್ತಾರೆ. ಅವರು ಪ್ರತೀ ಕ್ಷಣವೂ ನಿಮ್ಮ ನಗುವನ್ನು ನೆನಪಿಸಿಕೊಳ್ಳುತ್ತಾರೆ ಎಂದಿದ್ದರು.



ಇದನ್ನೆಲ್ಲಾ ಗಮನಿಸಿ ಸಾನಿಯಾ ಮತ್ತು ಶೋಯೇಬ್ ನಡುವೆ ಏನೋ ನಡೆಯುತ್ತಿದೆ. ಅದು ಅವರ ನಡುವಿನ ಸಂಬಂಧ ಎಂಬ ಚರ್ಚೆಯೂ ಈಗ ನಡೆಯುತ್ತಿದೆ. ಮಾತ್ರವಲ್ಲ ಇತ್ತೀಚೆಗಿನಿಂದ ಸಾನಿಯಾ ಮತ್ತು ಶೋಯೆಬ್ ಬೇರೆ ಬೇರೆಯಾಗಿ ಜೀವಿಸುತ್ತಿದ್ದಾರೆಂಬ ಸುದ್ದಿಯೂ ಹರಡಿದ್ದು, ಅದೂ ಭಾರೀ ವೈರಲ್ ಆಗಿದೆ. ಇದೀಗ ಪತಿ ಶೋಯೆಬ್ ಮಲಿಕ್ ಮಾಡಿರುವ ಮೋಸದಿಂದ ನೊಂದ ಸಾನಿಯಾ ವಿಚ್ಛೇದನ ಹಂತಕ್ಕೆ ಹೋಗಿದ್ದಾರೆ ಎಂಬ ಸುದ್ದಿಯೂ ಬೆಳಕಿಗೆ ಬಂದಿದೆ. ಮೋಡಲ್ ಆಯೆಷಾ ಒಮರ್ ಶೋಯೆಬ್ ಮಲಿಕ್‌ನ ವಿವಾಹೇತರ ಸಂಬಂಧ ಸಾನಿಯಾಗೆ ನುಂಗಲಾರದ ತುಪ್ಪದಂತಾಗಿದೆ ಎಂಬುವುದು ಸುದ್ದಿಯ ಸಾರಾಂಶ. ಕೆಲವು ವರ್ಷಗಳ ಹಿಂದೆ ಈ ರೂಪದರ್ಶಿ ಆಯಿಷಾ ಒಮರ್‌ರೊಂದಿಗೆ ಮಲಿಕ್ ಅವರ ಪರಿಚಯ ಪ್ರೇಮಕ್ಕೆ ತಿರುಗಿತ್ತು. ಮಾಡೆಲ್ ಬಗ್ಗೆ ತಲೆಕೆಡಿಸಿಕೊಂಡಿರುವ ಮಾಲಿಕ್, ಸಾನಿಯಾ ಬಗ್ಗೆ ಕಿಂಚಿತ್ತೂ ತಲೆ ಕೆಡಿಸಿಕೊಂಡಿರಲಿಲ್ಲ ಎಂದೂ ತಿಳಿದು ಬಂದಿದೆ. ಮಲಿಕ್‌ನಲ್ಲಿ ಇತ್ತೀಚೆಗೆ ಉಂಟಾದ ಬದಲಾವಣೆಯನ್ನು ಗಮನಿಸಿದ ಸಾನಿಯಾ ನಿಜವಾದ ವಿಷಯ ಏನೆಂದು ಕೊನೆಗೂ ತಿಳಿದು ಕೊಂಡಿದ್ದಾರೆ. ಅದರಿಂದ ಮನನೊಂದು ಹೊರ ಬಂದ ಸಾನಿಯಾ ತವರಿಗೆ ಬಂದಿದ್ದರು. ಹೆಂಡತಿ ದೂರದಲ್ಲಿದ್ದರೂ, ಮಲಿಕ್ ತನ್ನ ಮಾಡೆಲ್‌ಳನ್ನು ದೂರ ಮಾಡಿಸಿಕೊಳ್ಳಲು ತಯಾರಾಗಿಲ್ಲ. ಇದರಿಂದ ಕುಪಿತಗೊಂಡ ಸಾನಿಯಾ ಇದೀಗ ತಮ್ಮ ಸಂಬಂಧವನ್ನು ಅಂತ್ಯ ಗೊಳಿಸಲು ಸಿದ್ಧರಾಗಿದ್ದಾರೆ ಎನ್ನಲಾಗಿದೆ.

ಮದುವೆ ಸಂದರ್ಭದಲ್ಲಿ ಸಾನಿಯಾ ಹಲವು ಟೀಕೆಗಳನ್ನು ಎದುರಿಸಿದ್ದರು. ಅವರ ಮದುವೆಯ ಬಗ್ಗೆ ಹಲವು ರಾಜಕೀಯ ನಾಯಕರು ಸೆನ್ಸೇಷನಲ್ ಕಮೆಂಟ್ ಕೂಡಾ ಮಾಡಿದ್ದರು. ಆ ವೇಳೆ ಅವರಿಬ್ಬರ ಪ್ರೀತಿ ಗಡಿ ಮೀರಿ ಬೆಳೆದಿತ್ತು. ಎಲ್ಲರಿಂದಲೂ ಚರ್ಚೆಗೆ ಗ್ರಾಸವಾಗಿದ್ದ ಸಾನಿಯಾ 2010ರಲ್ಲಿ ಶೋಯೆಬ್ ಮಾಲಿಕ್ ಅವರನ್ನು ಮದುವೆಯಾದರು. ಈ ಇಬ್ಬರು ವಿಶ್ವದ ಸ್ಟಾರ್ ಜೋಡಿ ಎಂದು ಸದಾ ಸುದ್ದಿಯಲ್ಲಿದ್ದರು.

ಕಳೆದ 12 ವರ್ಷ ವರ್ಷಗಳಿಂದ ಹರಿಯುತ್ತಿದೆ. ಇಂತಹ ವದಂತಿಗಳ ಪ್ರಕಾರ ಅವರು ಈಗ ಪರಸ್ಪರ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ ಎಂದು ಹೇಳಲಾಗುತ್ತಿದೆ.

ಇದರ ಹಿಂದಿನ ನಿಖರ ಕಾರಣ ಇನ್ನೂ ಹೊರ ಬಂದಿಲ್ಲವಾದರೂ ಶೋಯೆಬ್ ತನ್ನ ಟಿವಿ ಶೋ ಒಂದರಲ್ಲಿ ಸಾನಿಯಾಗೆ ಮೋಸ ಮಾಡಿದ್ದಾನೆ ಎಂದು ಪಾಕಿಸ್ತಾನದ ಕೆಲವು ಮಾಧ್ಯಮಗಳು ವರದಿ ಮಾಡಿವೆ. ಆದರೆ ಈ ಸುದ್ದಿಗೆ ಇಬ್ಬರು ಇನ್ನೂ ಪ್ರತಿಕ್ರಿಯೆ ನೀಡಿಲ್ಲ. ಕಷ್ಟದ ಸಮಯಗಳು ಮತ್ತು ಮುರಿದ ಹೃದಯಗಳ ಕುರಿತು

## ಐ.ಸಿ.ಸಿ. ಅಧ್ಯಕ್ಷ ಗ್ರೆಗ್ ಬಾರ್ಕ್ಲೇ ಪುನರಾಯ್ಕೆ

ಐ.ಸಿ.ಸಿ. ಅಧ್ಯಕ್ಷರಾಗಿ ಗ್ರೆಗ್ ಬಾರ್ಕ್ಲೇ ಎರಡನೇ ಅವಧಿಗೆ ಅವಿರೋಧವಾಗಿ ಮರು ಆಯ್ಕೆಯಾಗಿದ್ದಾರೆ. ಬಾರ್ಕ್ಲೇ ಅವರು ಮುಂದಿನ ಎರಡು ವರ್ಷಗಳ ಕಾಲ ಐಸಿಸಿ ಅಧ್ಯಕ್ಷರಾಗಿ ಮುಂದರಿಯಲಿದ್ದಾರೆ.

ಐಸಿಸಿ ಅಧ್ಯಕ್ಷ ಸ್ಥಾನಕ್ಕೆ ಬಾರ್ಕ್ಲೇ ಅವರು ವಿರುದ್ಧ ಜಿಂಜಾಬ್ವೆಯ ತವೆ ತವೆಂಗ್ವಾ ಮುಕುಹಲಾನಿ ಕೂಡಾ ಸ್ಪರ್ಧಿಸಲಿದ್ದಾರೆ ಎಂಬ ಮಾತು ಆರಂಭದಲ್ಲಿ ಕೇಳಿ ಬಂದಿತ್ತು. ಆದರೆ ತವೆಂಗ್ವಾ ಮುಕುಹಲಾನಿ ಅವರು ಕೊನೆ ವೇಳೆ ಸ್ಪರ್ಧಾ ತೀರ್ಮಾನದಿಂದ ಹಿಂದಕ್ಕೆ ಸರಿದ ಕಾರಣ ಬಾರ್ಕ್ಲೇ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



ಎರಡನೇ ಅವಧಿಗೆ ಅಧ್ಯಕ್ಷರಾಗಿ ಆಯ್ಕೆಯಾದ ನಂತರ ಮಾತನಾಡಿದ ಬಾರ್ಕ್ಲೇ, ಐಸಿಸಿಯ ಅಧ್ಯಕ್ಷರಾಗಿ ಮರು ಆಯ್ಕೆಯಾಗಿರುವುದು ನನಗೆ ಗೌರವವಾಗಿದೆ. ತನ್ನನ್ನು ಬೆಂಬಲಿಸಿದ ಐಸಿಸಿಯ ಸಹ ನಿರ್ದೇಶಕರಿಗೆ ಧನ್ಯವಾದಗಳು ಎಂದಿದ್ದಾರೆ.

ಮೊದಲ ಬಾರಿಗೆ ಬಾರ್ಕ್ಲೇ 2020 ನವೆಂಬರ್ ತಿಂಗಳು ಐಸಿಸಿ ಅಧ್ಯಕ್ಷ ಕುರ್ಚಿಗೇರಿದ್ದರು. ಈ ಹಿಂದೆ ನ್ಯೂಜಿಲೆಂಡ್‌ನ ಕ್ರಿಕೆಟ್ ಮಂಡಳಿ ಅಧ್ಯಕ್ಷರಾಗಿದ್ದ ಬಾರ್ಕ್ಲೇ, ಆಗಿನ ಐಸಿಸಿ ಅಧ್ಯಕ್ಷರಾಗಿದ್ದ ಶಶಾಂಕ್ ಮನೋಹರ್ ಸ್ಥಾನಕ್ಕೆ ಎಂಟ್ರಿ ಕೊಟ್ಟಿದ್ದರು. ಅದಕ್ಕೂ ಮುನ್ನ 2015ರಲ್ಲಿ ಬಾರ್ಕ್ಲೇ ಐಸಿಸಿ ಪುರುಷರ ಕ್ರಿಕೆಟ್ ವಿಶ್ವಕಪ್‌ನ ನಿರ್ದೇಶಕರಾಗಿದ್ದರು. ಬಾರ್ಕ್ಲೇ ಅವಿರೋಧವಾಗಿ ಆಯ್ಕೆಯಾಗುವುದರೊಂದಿಗೆ 17 ಸದಸ್ಯರ ಮಂಡಳಿಯಲ್ಲಿ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಕೂಡಾ ಅವರಿಗೆ ಪೂರ್ಣ ಬೆಂಬಲ ನೀಡಿದೆ.

ಬಿಸಿಸಿಐ ಮೊದಲೇ ಗ್ರೆಗ್ ಬಾರ್ಕ್ಲೇ ಅವರ ಬಂಬಲಕ್ಕೆ ನಿಂತಿತ್ತು. ಈ ಹಿಂದೆ ನಡೆದ ಬಿಸಿಸಿಐ ಎಜಿಎಂನಲ್ಲೂ, ಅವರು ಈ ವಿಚಾರವನ್ನು ಸ್ಪಷ್ಟಪಡಿಸಿದ್ದರು. ಈ ಬಾರಿಯ ಚುನಾವಣೆ ಬಗ್ಗೆ ಹೇಳಬೇಕೆಂದರೆ ಹೊಸ ನಿಯಮದ ಆಧಾರದ ಮೇಲೆ ಈ ಬಾರಿ ಐಸಿಸಿ ಅಧ್ಯಕ್ಷ ಚುನಾವಣೆ ನಡೆಸಲಾಯಿತು. ವಾಸ್ತವವಾಗಿ ಮೂರರಲ್ಲಿ ಎರಡರಷ್ಟು ಬಹುಮತದ ಆಧಾರದ ಮೇಲೆ ಈ ಹಿಂದೆ ಆಯ್ಕೆ ಮಾಡಲಾಗುತ್ತಿತ್ತು. ಆದರೆ ಹೊಸ ನಿಯಮಗಳ ಪ್ರಕಾರ ಈ ಬಾರಿ ಐಸಿಸಿಯ ಅಧ್ಯಕ್ಷ ಸರಳ ಬಹುಮಾನದಿಂದ ಆಯ್ಕೆ ಮಾಡಲಾಗಿದೆ.

**ಸೌರವ್ ಗಂಗೂಲಿ ಹೆಸರೂ ಕೇಳಿ ಬಂದಿತ್ತು**

ಬಿಸಿಸಿಐ ಮಾಜಿ ಅಧ್ಯಕ್ಷ ಸೌರವ್ ಗಂಗೂಲಿ ಕೂಡಾ ಐಸಿಸಿ ಚುನಾವಣೆಯಲ್ಲಿ ಸ್ಪರ್ಧಿಸಬಹುದು ಎಂಬ ಸುದ್ದಿಯೂ ಹರಡಿತ್ತು. ಆದರೆ ಗಂಗೂಲಿಗೆ ಬಿಸಿಸಿಐಯ ಬೆಂಬಲ ಲಭಿಸಿರಲಿಲ್ಲ. ಮಾಧ್ಯಮಗಳ ವರದಿ ಪ್ರಕಾರ ಗಂಗೂಲಿಗೆ ಐಪಿಎಲ್ ಅಧ್ಯಕ್ಷ ಸ್ಥಾನ ನೀಡಲು ಬಿಸಿಸಿಐ ಮುಂದಾಗಿತ್ತು. ಆದರೆ ಗಂಗೂಲಿಗೆ ಐಸಿಸಿ ಅಧ್ಯಕ್ಷ ಅಥವಾ ಬಿಸಿಸಿಐ ಅಧ್ಯಕ್ಷರಾಗಿ ಮುಂದುವರಿಯುವ ಬಯಕೆ ಇತ್ತು. ಹೀಗಾಗಿ ಬಿಸಿಸಿಐ ನೀಡಿದ ಆಫರ್‌ನ್ನು ಗಂಗೂಲಿ ನಿರಾಕರಿಸಿದ್ದರು. ಇದಾದ ನಂತರ ಗಂಗೂಲಿ ಐಸಿಸಿ ಅಧ್ಯಕ್ಷ ಸ್ಥಾನದ ರೇಸ್‌ಗೆ ಎಂಟ್ರಿ ಕೊಟ್ಟಿದ್ದರು. ಆದರೆ ಬಿಸಿಸಿಐ ಅದನ್ನು ಬೆಂಬಲಿಸುವುದಿಲ್ಲ ಎಂದು ಸ್ಪಷ್ಟಪಡಿಸಿತ್ತು. ಹೀಗಾಗಿ ಗಂಗೂಲಿ ಐಸಿಸಿ ಅಧ್ಯಕ್ಷ ಸ್ಥಾನದ ರೇಸ್‌ನಿಂದ ಹೊರ ಬಿದ್ದರು.

## ರಾಜ್ಯ ಸ್ಕೂಲ್ ಜ್ಯೂನಿಯರ್ ಫುಟ್ಬಾಲ್ ಜಿಲ್ಲೆಗೆ ದ್ವಿತೀಯ ಸ್ಥಾನ

ಪಾಲ್ಘಾಟ್‌ನಲ್ಲಿ ನಡೆದ ರಾಜ್ಯ ಮಟ್ಟದ ಸ್ಕೂಲ್ ಜ್ಯೂನಿಯರ್ ಫುಟ್‌ಬಾಲ್ ಚಾಂಪ್ಯನ್‌ಶಿಪ್‌ನಲ್ಲಿ ಕಾಸರಗೋಡು ಜಿಲ್ಲೆ ದ್ವಿತೀಯ ಸ್ಥಾನ ಪಡೆದಿದೆ. ತಿರುವನಂತಪುರ ಜಿಲ್ಲೆ ಚಾಂಪ್ಯನ್ ಪಟ್ಟ ಗಳಿಸಿಕೊಂಡಿದೆ. ಫೈನಲ್‌ನಲ್ಲಿ ಕಾಸರಗೋಡು ಮತ್ತು ತಿರುವನಂತಪುರ ತಂಡಗಳಿಗೆ ಗೋಲ್ ಬಾರಿಸಲು ಸಾಧ್ಯವಾಗಲಿಲ್ಲ. ಅದರಿಂದಾಗಿ ಕೊನೆಗೆ ಟೈ-ಬ್ರೇಕ್ ನೀಡಲಾಯಿತು. ಅದರಲ್ಲಿ ಕಾಸರಗೋಡು ತಂಡ ತಿರುವನಂತಪುರದ ಎದುರು 4-3 ಗೋಲುಗಳಿಂದ ಪರಾಜಯಗೊಂಡು ದ್ವಿತೀಯ ಸ್ಥಾನದಲ್ಲಿ ತೃಪ್ತಿಪಡಬೇಕಾಗಿ ಬಂತು. ಕಾಸರಗೋಡು ಜಿಲ್ಲಾ ತಂಡದಲ್ಲಿ ಪಡನ್ನ ಕಡಪ್ಪುರ ಸರಕಾರಿ ಫಿಶರೀಸ್ ಹೈಯರ್ ಸೆಕೆಂಡರಿ ಶಾಲೆಯ ವಿದ್ಯಾರ್ಥಿ ಟಿ.ಕೆ. ಮುಹಮ್ಮದ್ ಮುಕ್ತಾರ್ ಜಸೀಮ್ ಅತ್ಯುತ್ತಮ ಪ್ರದರ್ಶನ ನೀಡಿದ್ದರು. ಅದರಿಂದಾಗಿ ಅವರನ್ನು ರಾಜ್ಯ ಶಾಲಾ ಸೀನಿಯರ್ ಫುಟ್‌ಬಾಲ್ ತಂಡಕ್ಕೂ ಆರಿಸಲಾಗಿದೆ.

## ನಗರ-ಗ್ರಾಮವೆಂಬ ವ್ಯತ್ಯಾಸವಿಲ್ಲದೆ ಎಲ್ಲೆಡೆಗಳಲ್ಲಿ ಕೆ-ಫೋನ್ ಸೌಕರ್ಯ

ಕಾಸರಗೋಡು: ರಾಜ್ಯದಲ್ಲಿ ಸರಕಾರದ್ದೇ ಆದ ಒಪ್ಟಿಕಲ್ ಫೈಬರ್ ಸರಣಿ ಸ್ಥಾಪಿಸಿ ಆ ಮೂಲಕ ಮನೆಗಳು ಮತ್ತು ಕಚೇರಿಗಳಲ್ಲಿ ಕ್ಷಿಪ್ರ ಇಂಟರ್‌ನೆಟ್ ಸಂಪರ್ಕ ಒದಗಿಸುವ ಕೆ-ಫೋನ್ ಯೋಜನೆಯನ್ನು ರಾಜ್ಯದಾದ್ಯಂತವಾಗಿ ಎಲ್ಲೆಡೆಗಳಿಗೆ ವಿಸ್ತರಿಸಲು ಸರಕಾರ ತೀರ್ಮಾನಿಸಿದೆ.

ಕೆಎಸ್‌ಇಬಿ (ರಾಜ್ಯ ವಿದ್ಯುನ್ಮಂಡಳಿ) ಮತ್ತು ಕೇರಳಸ್ಟೇಟ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ಸಂಯುಕ್ತವಾಗಿ ಜ್ಯಾರಿಗೊಳಿಸುವ ಯೋಜನೆಯಾಗಿದೆ ಇದು. ಈ ಯೋಜನೆಯಂತೆ ದೈನಂದಿನ 1.5 ಜಿಬಿಯ ಇಂಟರ್‌ನೆಟ್ ಸೌಕರ್ಯ ಒದಗಿಸಲಾಗುವುದು. ವೇಗತೆ ಒಂದು ಸೆಕೆಂಡ್‌ಗೆ 15 ಎಂ ಬಿ ಆಗಿದೆ.

ನಗರ ಯಾ ಗ್ರಾಮೀಣ ಪ್ರದೇಶಗಳೆಂಬ ಬೇಧಬಾವವಿಲ್ಲದೆ ಕೇರಳದಾದ್ಯಂತ ಅತ್ಯುತ್ತಮ ರೀತಿಯ ಇಂಟರ್‌ನೆಟ್ ಸಂಪರ್ಕ ಒದಗಿಸುವಂತೆ ಮಾಡುವ ಯೋಜನೆಯಾಗಿದೆ ಇದು. ಬಡತನ ರೇಖೆಗಿಂತ ಕೆಳಸ್ತರದಲ್ಲಿರುವ 20 ಲಕ್ಷ ಕುಟುಂಬಗಳಿಗೆ ಉಚಿತವಾಗಿ ಇಂಟರ್‌ನೆಟ್ ಸೌಕರ್ಯ ನೀಡಲಾಗುವುದು. ಇತರರಿಗೆ ಸಬ್ಸಿಡಿ ದರದಲ್ಲಿ ಸಂಪರ್ಕ ನೀಡಲಾಗುವುದು. ಶಿಕ್ಷಣ ಸಂಸ್ಥೆಗಳ ಮತ್ತು ಆಸ್ಪತ್ರೆಗಳ ಆನ್‌ಲೈನ್‌ಗಳು ಇದರಿಂದ ಸುಗಮಗೊಳ್ಳಲಿದೆ

## ಶಾಲೆಗಳಲ್ಲೂ ಇನ್ನು ಕೆ-ಫೋನ್

ಕಾಸರಗೋಡು: ಕೇರಳ ಸರಕಾರದ ಸ್ವಂತ ಮಾಲಕತ್ವದಲ್ಲೇ ಆರಂಭಿಸಲಾದ ಕೆ-ಫೋನ್ ಇಂಟರ್‌ನೆಟ್ ಸೇವಾ ಸೌಕರ್ಯ ಇನ್ನು ಎಲ್ಲಾ ಶಾಲೆಗಳಲ್ಲೂ ಲಭಿಸಲಿದೆ. ಶಾಲೆಗಳು ಮಾತ್ರವಲ್ಲ ಎಲ್ಲಾ ಸರಕಾರಿ ಕಚೇರಿಗಳು, ಆಸ್ಪತ್ರೆಗಳು, ಅಕ್ಷಯ ಕೇಂದ್ರಗಳು, ಪೊಲೀಸ್ ಠಾಣೆಗಳು ಇತರ ಎಲ್ಲಾ ಸಾರ್ವಜನಿಕ ಸಂಸ್ಥೆಗಳು ಇನ್ನು ಕೆ-ಫೋನ್ ಇಂಟರ್‌ನೆಟ್ ಸೇವೆಯ ವ್ಯಾಪ್ತಿಗೊಳಪಡಲಿದೆ.

ಕೆ-ಫೋನ್ ಎಂಬುವುದು ರಾಜ್ಯ ಸರಕಾರದ ಒಂದು ಮಹತ್ವಾಕಾಂಕ್ಷಿ ಯೋಜನೆಯಾಗಿದೆ.

## ಕೇಂದ್ರ ವಿಪತ್ತು ನಿರ್ವಹಣಾ ಪಡೆ, ಕ್ಷಿಪ್ರ ಕಾರ್ಯಾಚರಣೆ ಪಡೆ ಶಬರಿಮಲೆಯಲ್ಲಿ

ಶಬರಿಮಲೆ: ಭಕ್ತರ ಸೇವೆಗಾಗಿ ಕೇಂದ್ರ ವಿಪತ್ತು ನಿರ್ವಹಣಾ ಪಡೆ ಹಾಗೂ ಕ್ಷಿಪ್ತ ಕಾರ್ಯಾಚರಣಾ ಪಡೆಯನ್ನು ಶಬರಿಮಲೆಗೆ ಕೇಂದ್ರ ಸರಕಾರ ಕಳುಹಿಸಿಕೊಟ್ಟಿದೆ. ಈ ಪಡೆಗಳು ಶಬರಿಮಲೆ ಸನ್ನಿಧಾನದಲ್ಲಿ ಈಗ ನೆಲೆಯೂರಿದೆ. ಅಯ್ಯಪ್ಪ ಭಕ್ತರ ಮಾತ್ರವಲ್ಲ ಶಬರಿಮಲೆ ಕ್ಷೇತ್ರದ ರಕ್ಷಾ ಕಾರ್ಯಾಚರಣೆಗಳಲ್ಲೂ ಉಭಯ ಪಡೆಗಳು ಕಾರ್ಯವೆಸಗಲಿದೆ.

ಸನ್ನಿಧಾನ ಮಾತ್ರವಲ್ಲ ಶಬರಿಮಲೆ ಕ್ಷೇತ್ರ ಮತ್ತು ಪರಿಸರದಲ್ಲಿ ಕೇಂದ್ರ ಪಡೆಗಳನ್ನು ನಿಯೋಜಿಸಲಾಗಿದೆ. ಇವರು ಆಹೋರಾತ್ರಿ ಕಾವಲು ಸೇವೆಯಲ್ಲೂ ತೊಡಗಿದ್ದಾರೆ.

ವಯೋವೃದ್ಧ ತೀರ್ಥಾಟಕರು, ವಿಕಲ ಚೇತನರು ಜನಸಂದಣಿಗೆ ಸಿಲುಕದೆ ಅವರನ್ನು ಸುರಕ್ಷಿತವಾಗಿ ಸನ್ನಿಧಾನಕ್ಕೆ ತಲುಪಿಸಿ ಅಲ್ಲಿಂದ ಹಿಂತಿರುಗಿಸುವಂತೆ ಮಾಡುವ ಸಹಾಯದಲ್ಲೂ ಕೇಂದ್ರ ಪಡೆಗಳು ತೊಡಗಿವೆ. ಮಾತ್ರವಲ್ಲ ಪುಟ್ಟ ಮಕ್ಕಳಿಗೂ ಪಡೆಗಳು ಅಗತ್ಯದ ಸಹಾಯವೊದಗಿಸುತ್ತಿದೆ. ಜನಪ್ರವಾಹದ ವೇಳೆ ತೀರ್ಥಾಟಕರು ಬಾರಿಕೇಡ್‌ನೊಳಗೆ ಸಿಲುಕಿಕೊಂಡು ಅಲ್ಲಿ ಗಂಟೆಗಳ ತನಕ ಸಂಕಷ್ಟಪಡಬೇಕಾದ ಅನುಭವವೂ ಅವರಿಗೆ ಉಂಟಾಗುತ್ತಿದೆ. ಅವರಿಗೂ ಅಗತ್ಯದ ಸಹಾಯ ಪಡೆಗಳು ನೀಡುತ್ತಿವೆ. ಕೇಂದ್ರ ವಿಪತ್ತು ನಿರ್ವಹಣಾ ಪಡೆ ಹಾಗೂ ಕ್ಷಿಪ್ರ ಕಾರ್ಯಾಚರಣೆಯ ತಲಾ ಎರಡು ಕಂಪೆನಿಗಳು ಶಬರಿಮಲೆಗೆ ಆಗಮಿಸಿ ಈ ಸೇವೆಗಳಲ್ಲಿ ನಿರತವಾಗಿದೆ.